## ಎಲ್ಲಾ ಮಾಡ್ತಾರೆ

**ಶಿಕ್ಷಕಿ:** ಗುಂಡಾ, ನಿಮ್ಮ ತಂದೆ ಏನ್ ಕೆಲಸಾ ಮಾಡ್ತಾರೋ?
**ಗುಂಡ:** ನಮ್ಮಮ್ಮ ಹೇಳಿದ್ದನ್ನೆಲ್ಲಾ ಮಾಡ್ತಾರೆ.

## ಬಿಳಿ ಪಂಚೆ

**ಗಿರಾಕಿ:** ನಿಮ್ಮ ಅಂಗಡೀಲಿ, ಬಿಳಿ ಪಂಚೆ ಇದಾವೇನ್ರೀ?
**ಗುಂಡ:** ಇಲ್ಲಾ ಸ್ವಾಮಿ. ಬರೀ ಕಲರ್ ಪಂಚೆ ಇದಾವೆ.
**ಗಿರಾಕಿ:** ಹಾಗಾದ್ರೆ ಬೇಡ ಬಿಡಿ. ನಾನು ಬರೀ ಬಿಳಿ ಪಂಚೆ ಮಾತ್ರ ಹಾಕೋದು.
**ಗುಂಡ:** ಅಯ್ಯೋ, ಇದನ್ನೇ ತಗೊಂಡೋಗಿ. ಎರಡು ಸಲ ನೀರಿಗೆ ಹಾಕಿದ್ರೆ ಇದೂ ಬಿಳಿ ಆಗುತ್ತೆ.

## ಅಣ್ಣ ತಂಗಿ

**ಶಿಕ್ಷಕಿ:** ಗುಂಡಾ, ಭೂಮಿಗೂ ಚಂದ್ರನಿಗೂ ಏನು ಸಂಬಂಧ?
**ಗುಂಡ:** ಅಣ್ಣ–ತಂಗಿ ಸಂಬಂಧ ಮೇಡಂ.
**ಶಿಕ್ಷಕಿ:** ಅದ್ಹೇಗೋ?
**ಗುಂಡ:** ಹೌದು ಮೇಡಂ. ನಾವು ಭೂಮಿನಾ ತಾಯಿ ಅಂತೀವಿ. ಚಂದ್ರನ್ನ ಮಾಮ ಅಂತೀವಿ. ಹಾಗಾಗಿ ಅವರಿಬ್ಬರೂ ಅಣ್ಣ–ತಂಗಿ ಆಗ್ತಾರೆ.

## ಬಟ್ಟೆ ಒಣಗಾಕ್ತಾರೆ

**ಶಿಕ್ಷಕಿ:** ಗುಂಡಾ, ಎಲೆಕ್ಟ್ರಿಕ್ ವೈರ್ ಯಾಕೋ ಅಷ್ಟು ಎತ್ತರದಲ್ಲಿ ಕಟ್ಟಿರ್ತಾರೆ?
**ಗುಂಡ:** ಕೆಳಗೆ ಕಟ್ಟಿದ್ರೆ ಹೆಂಗುಸ್ರು ಬಟ್ಟೆ ಒಣಗಾಕ್ತಾರೆ ಅಂತಾ ಮೇಡಂ.

## ಭಕ್ತೆಯರು

**ಶಿಕ್ಷಕಿ:** ಹುಡುಗಿಯರು ಯಾಕೋ ದೇವಸ್ಥಾನಕ್ಕೆ ಹೋಗ್ತಾರೆ?
**ಗುಂಡ:** ಒಳ್ಳೇ ಗಂಡನ್ನ ಕೊಡು ಅಂತಾ ಕೇಳಿಕೊಳ್ಳೋದಕ್ಕೆ ಮೇಡಂ.
**ಶಿಕ್ಷಕಿ:** ಹಾಗಾದ್ರೆ ಮದುವೆಯಾದ ಹೆಂಗಸರು ಯಾಕೆ ಹೋಗ್ತಾರೆ?
**ಗುಂಡ:** ನಾನು ಬೇಡಿದ್ದೇನು, ನೀನು ಕೊಟ್ಟಿದ್ದೇನು? ಅಂತಾ ಕೇಳೋಕೆ.

## ಬೆಲ್ ಮಾಡಿ ಹೋದೆ

**ಮನೆಯವ:** ನಿನ್ನೇನೆ ಬಂದು ಕಾಲಿಂಗ್ ಬೆಲ್ ರಿಪೇರಿ ಮಾಡ್ತೀನಿ ಅಂದಿದ್ದೆ. ಯಾಕಯ್ಯಾ ಬರಲೇ ಇಲ್ಲಾ?
**ಗುಂಡ:** ಅಯ್ಯೋ, ಬಂದಿದ್ದೆ ಸಾರ್. ನಾಲ್ಕಾರು ಬಾರಿ ಕಾಲಿಂಗ್ ಬೆಲ್ ಮಾಡ್ದೆ. ನೀವ್ಯಾರು ಬಾಗಿಲು ತೆಗೀಲಿಲ್ಲ. ಯಾರೂ ಇಲ್ಲ ಅಂದ್ಕೊಂಡು ವಾಪಸ್ ಹೋದೆ.

## ಏನಿದೆ?

**ಶಿಕ್ಷಕಿ:** ಮೈಸೂರಲ್ಲಿ ಅರಮನೆ ಇದೆ. ಹಾಗೆನೇ ಕುದುರೆ ಮುಖದಲ್ಲಿ ಏನೇನಿದೆ?
**ಗುಂಡ:** ಕಣ್ಣು, ಬಾಯಿ, ಮೂಗು, ಕಿವಿ ಇರುತ್ತೆ.




**ಮಂತ್ರಿಗಳು ಸ್ಕೂಲ್‌ಗೆ ಬಂದಾಗ ಮಾತ್ರ ನಮಗೆಲ್ಲ ಚಾಕೊಲೇಟ್ ಕೊಟ್ರೆ ಆಗಲ್ಲ ಸರ್! ಇನ್ಮೇಲೆ ದಿನಾ ಚಾಕೊಲೇಟ್ ಕೊಟ್ರೇನೆ ನಾವೆಲ್ಲ ಸ್ಕೂಲ್‌ಗೆ ಬರೋದು!**

## ರಣಬೇಟೆಗಾರ

**ಸೀನ:** ಯಾಕೋ ಗುಂಡ, ಕೈಯಲ್ಲಿ ಬಂದೂಕು ಹಿಡಿದು ಬಾಗಿಲಲ್ಲೇ ನಿಂತಿದ್ದೀಯಾ?
**ಗುಂಡ:** ಪಕ್ಕದ ಊರಲ್ಲಿ ನರಭಕ್ಷಕ ಚಿರತೆ ಬಂದಿದೆಯಂತೆ. ಅದನ್ನು ಬೇಟೆಯಾಡಲು ಹೊರಟಿದ್ದೇನೆ.
**ಸೀನ:** ಮತ್ತೆ ಇಲ್ಲೇ ಯಾಕೆ ನಿಂತೆ?
**ಗುಂಡ:** ಪಕ್ಕದ ಮನೆಯವರು ನಾಯಿ ಬಿಚ್ಚಿದ್ದಾರೆ. ಅವರಿಗೆ ಕಾಲ್ ಮಾಡಿ ಹೇಳಿದ್ದೇನೆ. ಅವರು ನಾಯಿ ಕಟ್ಟಿದ ಮೇಲೆ ಹೋಗ್ತೇನೆ.

## ಗಾಡಿ ಮಾಡೆಲ್

**ಸೀನ:** ಗುಂಡ, ಯಾವ ಮಾಡಲ್ ಗಾಡಿ ತಗೊಂಡ್ರೆ ಹುಡ್ಗೀರ ಬೀಳಿಸ್ಬೋದು ಮಚ್ಚಾ?
**ಗುಂಡ:** ಗಾಡೀ ಮಾಡಲ್‌ಗೆ ಅಲ್ಲಾ ಮಚ್ಚೀ ಅದರಲ್ಲಿ ಗುದ್ದಿದ್ರೆ ಬೀಳ್ತಾಳೆ.

ಸಂಗ್ರಹ: ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು

**ತಿಮ್ಮ:** ಆತ್ಮಹತ್ಯೆ ಬಗ್ಗೆ ಬುಕ್ ಇದ್ಯಾ?
**ಗ್ರಂಥಪಾಲಕ:** ಇದೆ
**ತಿಮ್ಮ:** ಕೊಡಿ ಮತ್ತೆ
**ಗ್ರಂಥಪಾಲಕ:** ಕೊಡ್ತೀನಿ. ಆದ್ರೆ ಆ ಬುಕ್ ರಿಟರ್ನ್ ಮಾಡೋದು ಯಾರು?

***

**ತಾತ:** ಪುಟ್ಟ ಬೇಗ ಹೋಗಿ ಬಚ್ಚಿಟ್ಕೊ.
**ಮೊಮ್ಮಗ:** ಯಾಕೆ ತಾತ?
**ತಾತ:** ನೀನು ಸುಳ್ ಹೇಳಿ ಸ್ಕೂಲ್‌ಗೆ ಚಕ್ಕರ್ ಹಾಕಿರೋದು ನಿಮ್ ಟೀಚರ್‌ಗೆ ಗೊತ್ತಾಗ್ಬಿಟ್ಟಿದೆ ಅನ್ಸುತ್ತೆ. ಅದ್ಕೆ ನಿನ್ನ ಹುಡ್ಕೊಂಡು ನಿಮ್ ಟೀಚರ್ ಬರ್ತಾ ಇದಾರೆ.
**ಮೊಮ್ಮಗ:** ತಾತ ಬಚ್ಚಿಟ್ಕೊಬೇಕಿರೋದು ನಾನಲ್ಲ ನೀನು. ಯಾಕಂದ್ರೆ ನೀನ್ ಸತ್ತೋಗಿದ್ದೀಯ ಅಂತ ಹೇಳಿ ನಾನ್ ಸ್ಕೂಲ್‌ಗೆ ಚಕ್ಕರ್ ಹಾಕಿರೋದು!

***

**ತಂಗಿ:** ಅಜ್ಜಿ ಹುಟ್ಟಬ್ಬಕ್ಕೆ ಯಾವ ಉಡುಗೊರೆ ಕೊಡ್ತೀಯ?
**ಅಣ್ಣ:** ಆಟದ ಚೆಂಡು.
**ತಂಗಿ:** ಈ ವಯಸ್ಸಲ್ಲಿ ಆ ಚೆಂಡಿನೊಂದಿಗೆ ಅಜ್ಜಿ ಆಡೋಕೆ ಆಗುತ್ತಾ?
**ಅಣ್ಣ:** ಮತ್ತೆ ನನ್ ಹುಟ್ಟಬ್ಬಕ್ಕೆ ಅಜ್ಜಿ ಭಗವದ್ಗೀತೆ ಕೊಟ್ಟಿದ್ ಸರಿನಾ?

***

**ಗಂಡ:** ಲೇ ನಿಂಗೆ ಹಬ್ಬಕ್ಕೆ ಸೀರೆ ತರ್ಲಾ, ಚೂಡಿದಾರ ತರ್ಲಾ?
**ಹೆಂಡ್ತಿ:** ಹ... ನಿಂಗೆ ಒಗೆಯೋದಕ್ಕೆ ಯಾವ್ದು ಸುಲ್ಭ ಅನ್ಸುತ್ತೊ ಅದನ್ನೇ ತನ್ನಿ!

***

**ಅಪ್ಪು:** ಸಮಾನತೆ ಎಲ್ಲಿದೆ?
**ಕೃಷಿಕ್:** ಬಾರಿನಲ್ಲಿ.
**ಅಪ್ಪು:** ಅದು ಹೇಗೆ?
**ಕೃಷಿಕ್:** ಅಲ್ಲಿ ಕುಡಿದ ಮೇಲೆ ಎಲ್ಲರಿಗೂ ಒಂದೇ ಹೆಸರು 'ಕುಡುಕ' ಅಂತ ಅದಕ್ಕೆ.

ಸಂಗ್ರಹ: ಟಿ.ಎಸ್. ಪ್ರತಿಭಾ, ಚಿತ್ರದುರ್ಗ